ಓ.ಎಸ್. ನಂಃ **41/2023**
ಪಿ **<u>ಡಬ್ಲ್ಯೂಃ 1</u>**

ದಿನಾಂಕಃ 30-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿ ಶ್ರೀ ಎಂ ಬಿ ಪಿ ಹೆಚ್ ವಕೀಲರಿಂದಃ</u>

ಸರ್ವೆ ನಂ.37 ರಲ್ಲಿ ಒಟ್ಟು ಎಷ್ಟು ಜಮೀನು ಇದೆ ಎಂಬುದು ನನಗೆ ಗೊತ್ತಿಲ್ಲ. ಸರ್ವೆ ನಂ.37 ರಲ್ಲಿ ಎಷ್ಟು ಹಿಸ್ಸೆಗಳು ಇವೆ ಎಂದರೆ ಸಾಕ್ಷಿಯು ಯಾವುದೇ ಸಮಂಜಸ ಉತ್ತರ ನೀಡಿರುವುದಿಲ್ಲ. ಸರ್ವೆ ನಂ.37 ರ ಒಟ್ಟು ಜಮೀನಿನ ಪೂರ್ವಕ್ಕೆ ಗುಂಡೆನೋರ ರವರ ಹೊಲ, ಪಶ್ಚಿಮಕ್ಕೆ ಭೀಮಶಪ್ಪ ರವರ ಹೊಲ, ದಕ್ಷಿಣಕ್ಕೆ ನಮ್ಮದೇ ಜಮೀನು ಹಾಗೂ ಉತ್ತರಕ್ಕೆಪ್ರತಿವಾದಿಯರ ಜಮೀನು ಇದೆ.

2. ಪ್ರತಿವಾದಿಯರು ನಿಮಗೆ ತೊಂದರೆ ನೀಡಿದ್ದಾರೆ ಎಂದು ದಾವೆಯಲ್ಲಿ ಬರೆಸಿದ್ದು, ಯಾವ ದಿನಾಂಕದಂದು ತೊಂದರೆ ನೀಡಿದ್ದಾರೆ ಎಂದರೆ ಸಾಕ್ಷಿಯು ನನಗೆ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರ ಜಮೀನು ಸರ್ವೆ ನಂ.36 ಇರುತ್ತದೆ ಎಂದರೆ ಸರಿ. ಪ್ರತಿವಾದಿಯರು ಒಟ್ಟು 09 ಎಕರೆ 28 ಎಕರೆ ಜಮೀನು ಹೊಂದಿದ್ದಾರೆ ಎಂದರೆ ಸರಿ. ಸದರಿ ಜಮೀನು ಪ್ರತಿವಾದಿಯರಿಗೆ ತಮ್ಮ ಹಿರಿಯರಿಂದ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಪ್ರತಿವಾದಿಯರು ಪಾಲು ಮಾಡಿಕೊಂಡಿದ್ದಾರೆ ಎಂದರೆ ಸರಿ. ಪ್ರತಿವಾದಿಯರ ಜಮೀನು ಮೊದಲು ಅವರ ತಂದೆಯ ಹೆಸರಿನಲ್ಲಿ ಇತ್ತು ಆ ನಂತರ ಅವರುಗಳು ಹಕ್ಕು ಬದಲಾವಣೆ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2019 ರಲ್ಲಿ ಭೂ ಮಾಪಕರು ಪ್ರತಿವಾದಿಯರ ಸದರಿ ಜಮೀನು ಅಳತೆ ಮಾಡಿ 04 ಪಾಲು ಮಾಡಿಕೊಟ್ಟು ನಮೂನೆ 10 ನ್ನು ತಯಾರಿಸಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.36 ರಲ್ಲಿ ಈಗ 36/1, 36/2, 36/3 ಹಾಗೂ 36/4 ಎಂದು 04 ಹಿಸ್ಸೆಗಳು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಸರ್ವೆ ನಂ.36 ಹಾಗೂ ನಮ್ಮ ಸರ್ವೆ ನಂ.37 ರ ಜಮೀನುಗಳ ಜಮೀನು ಒಂದಕ್ಕೊಂದು ಹೊಂದಿಕೊಂಡು ಇವೆ ಎಂದರೆ ಸರಿ. ನಾವು ಪ್ರತಿವಾದಿಯರ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಯರ ಜಮೀನಿನ ದಕ್ಷಿಣ ಭಾಗದ 1 ನೇ ಪ್ರತಿವಾದಿಯ 03 ಗುಂಟೆ, 2 ನೇ ಪ್ರತಿವಾದಿಯ 08 ಗುಂಟೆ, 3 ನೇ ಪ್ರತಿವಾದಿಯ 07 ಗುಂಟೆ ಹಾಗೂ 4 ನೇ

ಪ್ರತಿವಾದಿಯ 05 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾವು ಒತ್ತುವರಿ ಮಾಡಿದ್ದರಿಂದ ಪ್ರತಿವಾದಿಯರು ಹದ್ದುಬಸ್ತ್ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಭೂ ಮಾಪಕರು ಅಳತೆ ಮಾಡಿ ನೀವು ಒತ್ತುವರಿ ಮಾಡಿರುವುದಾಗಿ ವರದಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಂತರ ಊರಿನ ಮುಖಂಡರ ಸಮಕ್ಷಮ ಪಂಚಾಯಿತಿ ಮಾಡಲಾಗಿ ನಾವು ಒತ್ತುವರಿ ಮಾಡಿದ ಜಮೀನನ್ನು ದಿಃ 24.09.2022 ರಂದು ಪ್ರತಿವಾದಿಯರಿಗೆ ಬಿಟ್ಟುಕೊಟ್ಟಿದ್ದೆವು ಎಂದರೆ ಸರಿಯಲ್ಲ. ಆ ನಂತರ ಈ ದಾವೆ ದಾಖಲಿಸಿ ಏಕಪಕ್ಷಿಯ ಮಧ್ಯಂತರ ನಿಷೇದಾಜ್ಞೆ ಆದೇಶ ಪಡೆದುಕೊಂಡು ಅದರ ದುರುಪಯೋಗ ಪಡಿಸಿಕೊಂಡು ದಿಃ 20.06.2023 ರಂದು ಪ್ರತಿವಾದಿಯರ ಜಮೀನನ್ನು ಮತ್ತೆ ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಒತ್ತುವರಿ ಮಾಡಿದ ಜಮೀನನ್ನು ಪ್ರತಿವಾದಿಯರಿಗೆ ಕೊಡಬಾರದೆಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ **ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ